## ಜೋಳದ ರಾಶಿ ಗುಡ್ಡ



ರೈತರು ಬೆಳೆದ ಫಸಲನ್ನು ಕಣದಲ್ಲಿ ಒಕ್ಕಲು ಮಾಡಿ ಒಂದೆಡೆ ರಾಶಿ ಹಾಕುತ್ತಾರೆ. ಧಾನ್ಯಲಕ್ಷ್ಮಿ ಎಂದು ನಂಬಿದ ಆ ರಾಶಿಗೆ ಶ್ರದ್ಧಾಭಕ್ತಿಯಿಂದ ಪೂಜೆಸಲ್ಲಿಸಿ ನಿಯಮಾನುಸಾರ ಉತ್ತಮ ಫಸಲು ಬರಲು ಕೈ ಜೋಡಿಸಿದ ಎಲ್ಲರಿಗೂ ಇಂತಿಷ್ಟು ಪಾಲು ನೀಡುವುದು ಕಣಕ್ಕೆ ಬೇಡಲು ಬಂದ ಬಡಬಗ್ಗರಿಗೂ ತಮ್ಮ ಕೈಲಾದಷ್ಟು ದಾನವನ್ನು ರಾಶಿಯಿಂದಲೇ ನೀಡುತ್ತಾರೆ.

ಬಯಲು ಸೀಮೆಯ ಹೊಸಪೇಟೆಯ ಹೊರವಲಯದ ಜಮೀನಿನಲ್ಲಿ ಶ್ರಮವಹಿಸಿ ಬೆಳೆದ ಜೋಳದ ರಾಶಿಯ ಕಂಡ ಮುತ್ತೈದೆ ಮಹಿಳೆಯೋರ್ವಳು ತಡವಾಗಿ ಬಂದು ತನಗೂ ಈ ಜೋಳದ ರಾಶಿಯಲ್ಲಿ ತನ್ನ ಜೋಳಿಗೆ ತುಂಬುವಷ್ಟು ನೀಡುವಂತೆ ಬೇಡಿಕೊಂಡರೂ ಆ ರಾಶಿಯ ಒಡೆಯ ಆ ಮಹಿಳೆ ಮಾತು ಪೂರೈಸಲು ಹಿಂಜರಿದಾಗ... ಅವಳು 'ಜೋಳದ ರಾಶಿ ಕಲ್ಲು ಮಣ್ಣಿನದಾಗಲಿ' ಶಾಪ ನೀಡಿದಳಂತೆ. ಆದ್ದರಿಂದ 'ಜೋಳದ ರಾಶಿಯ ಗುಡ್ಡ' ಆಗಿದೆ. ಎನ್ನುವುದು ಸ್ಥಳೀಯರಲ್ಲಿ ಪ್ರಚಲಿತದಲ್ಲಿ ಇರುವ ಜನಪದ ಕಥೆ.

ಇತ್ತೀಚೆಗೆ 75ನೇ ಸ್ವಾತಂತ್ರ್ಯ ದಿನಾಚರಣೆಯ ದಿನದ ಅಂಗವಾಗಿ ಗುಡ್ಡದ ಮೇಲೆ ಹೊಸದಾಗಿ ನಿರ್ಮಿಸಿದ ನೂರು ಅಡಿ ಎತ್ತರದ ಧ್ವಜ ಸ್ತಂಭದಲ್ಲಿ ಧ್ವಜಾರೋಹಣ ಮಾಡಲಾಯಿತು.

–ರಘುನಾಥರಾವ್ ತಾಪ್ಸೆ, ದಾವಣಗೆರೆ



## ಕಂಟೌಲಿ ಕಾಡು ತರಕಾರಿ!

ಮೈಮೇಲೆ ಸೂಕ್ಷ್ಮ ಮುಳ್ಳುಗಳಿರುವ 'ಕಂಟೌಲಿ' ಎಂಬ ಈ ತರಕಾರಿಯನ್ನು ಮಹಾರಾಷ್ಟ್ರದ ಹಳ್ಳಿಗರು ಕಾಡು ರಸ್ತೆಯ ಬದಿಯಲ್ಲಿ ಮಳೆಗಾಲದಲ್ಲಿ ಮಾರಲು ಹಾಸಿಡುತ್ತಾರೆ.

'ಕಂಟೌಲಿ' ಎಂಬುದು ಮರಾಠಿ ನಾಮಧೇಯವಾದರೆ ಕನ್ನಡದಲ್ಲಿ ಕಾಡು ಹಾಗಲಕಾಯಿ ಎನ್ನುತ್ತಾರೆ. ರಚನೆಯಲ್ಲಿ ಹಾಗಲಕಾಯಿಯ ಸ್ವರೂಪ ಹೊಂದಿದ್ದರೂ ರುಚಿಯಲ್ಲಿ ಅಷ್ಟು ಕಹಿಯಿಲ್ಲ, ಗಾತ್ರವೂ ಚಿಕ್ಕದು. ಸುಮಾರು 2 ಇಂಚು ಉದ್ದ ಹಾಗೂ 1 ಇಂಚು ವ್ಯಾಸವಿದ್ದು ಅಂಡಾಕಾರದಲ್ಲಿದೆ. ಕಾಡು ಜಾತಿಯ ಈ ವಿಶಿಷ್ಟ ತರಕಾರಿಯನ್ನು ಬೀಜ ಬಿತ್ತಿ ವ್ಯವಸ್ಥಿತವಾಗಿ ಬೇಸಾಯ ಮಾಡುವುದಿಲ್ಲ. ಮಳೆಗಾಲದಲ್ಲಿ ಮಾತ್ರ ಕಾಯಿ ಬಿಡುವ ಸಸ್ಯ ಇದು.

ಆಕಾರದಲ್ಲಿ ಕೊರೋನ ವೈರಸ್ ರೂಪವನ್ನು ಹೋಲುವಂತಿದ್ದರೂ ವಿಟಾಮಿನ್ ಸಿ ಅಂಶ ಹೇರಳವಾಗಿದ್ದು ಸೋಂಕು ನಿರೋಧಕವಾಗಿದೆ. ಸಕ್ಕರೆ ಕಾಯಿಲೆಗೆ ರಾಮಬಾಣ ಎನ್ನುವುದು ನಾಟಿ ವೈದ್ಯರ ಅಂಬೋಣವಾಗಿದೆ.

–ರಮಣ್ ಶೆಟ್ಟಿ ರೆಂಜಾಳ್ ಮುಂಬಯಿ

## ಹಸಿರು ಚಾವಣಿ

ಆಗುಂಬೆ ಮಹೋನ್ನತ ಪ್ರದೇಶ. ಪಶ್ಚಿಮ ಘಟ್ಟ ಶ್ರೇಣಿಗಳಲ್ಲಿ ಬರುವ ಬಹೃತ್ ಜೀವವೈವಿಧ್ಯದ ತಾಣ. ಘಟ್ಟದ ಮೇಲೆ ಆಗುಂಬೆ ಆದರೆ ಘಾಟಿ ರಸ್ತೆ ದಾಟಿದ ಕೂಡಲೆ ಕೆಳಗೆ ಸಿಗುವುದು ಸೋಮೇಶ್ವರ. ಅಲ್ಲಿಂದ ಮುಂದೆ ಹೆಬ್ರಿ ರಸ್ತೆಯ ಆರಂಭದಲ್ಲಿ ಒಂದು ವನೋತ್ಪನ್ನ ತನಿಖಾ ಠಾಣೆ ಇದೆ.

ಅದರ ಪಕ್ಕದಲ್ಲಿ ಒಂದು ಪುಟ್ಟ ತಂಗುದಾಣ ಹಸಿರು ಚಾವಣಿ ಪಡೆದು ಗಮನ ಸೆಳೆದಿದೆ. ಎಲ್ಲೆಲ್ಲೂ ಹಸಿರು ಮಯವಾಗಿರುವಾಗ ಮೇಲಿನಿಂದ ಬಿದ್ದ ಮರದ ಎಲೆಗಳು ಮಾಡಿನ ಮೇಲೆ ಕೊಳೆತು ಹಸಿರು ಹುಲ್ಲು ಬೆಳೆಯಲು ಸಹಕರಿಸಿದೆ. ಮಳೆಗಾಲ ಮುಗಿದೊಡನೆ ಒಣಗಿ ನಂತರ ಪುನಃ ಮರು ಮಳೆಗಾಲದಲ್ಲಿ ಪ್ರತ್ಯಕ್ಷವಾಗುವುದೇ ಸೋಜಿಗ. ಪ್ರಕೃತಿಯಲ್ಲಿ ಒಂದಕ್ಕೊಂದು ಪೂರಕವೆಂಬುದು ರುಜುವಾತಾಗಿದೆ. ಪಶ್ಚಿಮ ಘಟ್ಟಗಳ ಸಂಕೀರ್ಣ ಪರಿಸರಕ್ಕೆ ಇದು ಉದಾಹರಣೆ. ರೆಸಾರ್ಟ್‌ಗಳಲ್ಲಿ ಹಸಿರು ಮಾಡು ಮಾಡಿ ಜನರನ್ನು ಆಕರ್ಷಿಸುವ ಇರಾದೆ ಇರುವವರಿಗೆ ಇದೊಂದು ಉಪಾಯ ಸೂಚಿಸಿದಂತಿದೆ,

–ಎಸ್. ಶಿಶುಪಾಲ, ದಾವಣಗೆರೆ

